**<u>ದಿನಾಂಕ 07.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಅಧಿಕಾರ ಪತ್ರವನ್ನು **ನಿಪಿ 22** ಎಂದು, ಪೊಲೀಸ್ ಇಂಟಿಮೇಷನ್ ನ ದೃಢೀಕೃತ ಪ್ರತಿಯನ್ನು **ನಿಪಿ 23** ಎಂದು, ಎಂ.ಎಲ್.ಸಿ ರಿಜಿಸ್ಟರ್ ಎಕ್ಸ್ ಟ್ರಾ ಕ್ಟ್ ( ಮೂಲ ವಹಿಯೊಂದಿಗೆ ಹೋಲಿಕೆ ಮಾಡಿ ಮೂಲ ವಹಿಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು) ಅನ್ನು **ನಿಪಿ 24** ಎಂದು, ಕೇಸ್ ಶೀಟನ್ನು **ನಿಪಿ 25** ಎಂದು, ಕ್ಷ-ಕಿರಣನ್ನು **ನಿಪಿ 26** ಎಂದು ಗುರುತಿಸಲಾಯಿತು.

1ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.</u>**

ನಾನು ಸುಮಾರು 5 ವರ್ಷಗಳಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅರ್ಜಿದಾರರು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಮ್ಮ ಆಸ್ಪತ್ರೆಗೆ ಬಂದರೋ, ನಮ್ಮ ಆಸ್ಪತ್ರೆಗೆ ಮೊದಲು ಬಂದರೋ ಎಂದು ನನಗೆ ಮಾಹಿತಿ ಇಲ್ಲ. ನನಗೆ ದಾಖಲಾತಿಗಳ ಬಗ್ಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಯಾವ ರೀತಿಯ ಚಿಕಿತ್ಸೆ ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 24 ಅನ್ನು ಬರೆದ ವೈದ್ಯರು ಪ್ರಸ್ತುತ ನಮ್ಮ ಆಸ್ಪತ್ರೆಯಲ್ಲಿಯೇ ಕೆಲಸ

ಮಾಡುತ್ತಿದ್ದಾರೆ. ನಿಪಿ 24 ರಲ್ಲಿ ವಾಹನದ ಮಾದರಿ ಮತ್ತು ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**